ಕೃಷಿ ವಿಶ್ವ ವಿದ್ಯಾನಿಲಯ
**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**
**ಜಿ.ಕೆ.ವಿ.ಕೆ., ಬೆಂಗಳೂರು–560065**
*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

**ದಿನಾಂಕ:** 13.05.2021

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 14-05-2021 ರಿಂದ 18-05-2021ವರೆಗೆ)

| ನಿಯತಾಂಕಗಳು | 14.05.2021 | 15.05.2021 | 16.05.2021 | 17.05.2021 | 18.05.2021 |
|---|---|---|---|---|---|
| ಮಳೆ (ಮಿ ಮಿ) | 18 | 12 | 23 | 19 | 16 |
| ಗರಿಷ್ಠ ಉಷ್ಣಾಂಶ°(ಡಿ.ಸೆ. ) | 32 | 32 | 34 | 32 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 22 | 22 | 21 | 21 | 20 |
| ಮೋಡ (ಪ್ರಮಾಣ) | 6 | 6 | 6 | 6 | 6 |
| ಆರ್ದ್ರತೆ 7.20 ಬೆ (ಶೇ) | 87 | 89 | 91 | 94 | 91 |
| ಆರ್ದ್ರತೆ 2.20 ಮ (ಶೇ) | 64 | 65 | 77 | 74 | 66 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 10 | 26 | 40 | 20 | 15 |
| ಗಾಳಿಯ ದಿಕ್ಕು ( ಡಿಗ್ರಿ) | 79 | 112 | 114 | 167 | 159 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆ0ಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **33.0-34.0°C** ಮತ್ತು ಕನಿಷ್ಠ **22.0-23.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **80-82 %** ಇದ್ದು ಮಧ್ಯಾಹ್ನ **47-50 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **3-4** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ➢ ಕೃತ್ತಿಕ ನಕ್ಷತ್ರದ ಮಳೆಯ ಕಾಲವು ಮೇ ತಿಂಗಳ 11 ರಿಂದ ಮೇ 24 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 48.6 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಅರಬ್ಬೀ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿಯಿಂದಾಗಿ 16 ನೇ ಮೇ 2021 ರಂದ ಚಂಡಮಾರುತವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ ಮತ್ತು ಹಗುರದಿಂದ ಸಾದಾರಣ ಮಳೆಯಾಗುವ ಸಾಧ್ಯತೆ ಹೆಚ್ಚು.<br>➢ ಈ ವರ್ಷ ವಾಡಿಕೆ ಮುಂಗಾರು ಬರುವ ಮುನ್ಸೂಚನೆಯಿದೆ ಆದ್ದರಿಂದ ರೈತರು ಆತಂಕಕ್ಕೊಳಗಾಗುವ ಅವಶ್ಯಕತೆ ಇಲ್ಲ.<br>➢ ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಪೂರ್ವ ಮುಂಗಾರು ಬೆಳೆಗಳನ್ನು ಬಿತ್ತಲು ಇದು ಸೂಕ್ತ ಸಮಯ.<br>➢ ಉತ್ತಮ ಮಳೆಯ ಅವಕಾಶ ಇರುವುದರಿಂದ ಬದುಗಳ ಸುತ್ತಲು ಮೇವಿನ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಿ ಇದರಿಂದ ಬದುಗಳು ಭದ್ರವಾಗಿರುತ್ತವೆ ಮತ್ತು ಜಮೀನುಗಳಲ್ಲಿ ನೀರಿನ ತೇವಾಂಶವನ್ನು ಕಾಪಾಡುತ್ತದೆ.<br>➢ ಬೇಸಿಗೆ ಉಳುಮೆ ಮಾಡುವುದರಿಂದ ಹುಳುಗಳ ವಿವಿಧ ಹಂತಗಳನ್ನು ನಾಶಪಡಿಸಬಹುದು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.<br>➢ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸರಾಸರಿ 36 ಮತ್ತು 93 ಮಿ.ಮೀ ಇರುವುದರಿಂದ ಎರಡುಬೆಳೆ ಪದ್ಧತಿಯಲ್ಲಿ ಮೊದಲ ಬೆಳೆಯಾಗಿ, ಈ ಕೆಳಗಿನ ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.<br>ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ: ಎಚ್.ಎ–1,2,3 ಮತ್ತು 4<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು<br>➢ ಪೂರ್ವ ಮುಂಗಾರಿಗೆ ಅಲಸಂದೆ, ಎಳ್ಳು ಮತ್ತು ಅವರೆ ಬಿತ್ತನೆ ಬೀಜಗಳನ್ನು ಸಿದ್ಧತೆಗಳನ್ನು ಮಾಡಿಕೊಳ್ಳಿ,<br>➢ ಹಿಂಗಾರಿ ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.<br>➢ ತರಕಾರಿ ಮತ್ತು ಹಣ್ಣಿನ ಬೆಳೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆಯನ್ನು ಮಾಡಿ ಹನಿ ನೀರಾವರಿ ಕೊಡುವುದರಿಂದ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ ಮತ್ತು ಕಳೆಗಳ ನಿಯಂತ್ರಣವಾಗುತ್ತವೆ.<br>ಅವರೆ ಎಳ್ಳು : ನವಿಲೆ–1, ಟಿ–7, ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ: ಎಚ್.ಎ–1,2,3 ಮತ್ತು 4 |

| | |
|---|---|
| | ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ |
| **ಮಾವು** | ➢ ಹೆಚ್ಚು ಗಾಳಿ ಮತ್ತು ಮಳೆಯಿಂದಾಗಿ ಮಾವಿನಲ್ಲಿ ಹಣ್ಣುಗಳು ಉದುರುವುದು ಸಾಮಾನ್ಯವಾಗಿರುತ್ತದೆ ಮತ್ತು ಹಣ್ಣಿನ ನೊಣಗಳ ಹಾವಳಿ ಕೂಡ ಹೆಚ್ಚಾಗಿ ಕಂಡುಬರುತ್ತದೆ, ಇದರ ಹತೋಟಿಗೆ ಕಾರ್ಬರಿಲ್ 4 ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | **ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>➢ ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>➢ ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>➢ ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಆಡುವಂತೆ ವ್ಯವಸ್ಥೆ ಮಾಡಬೇಕು.<br>➢ ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |
| **ಕೋಳಿ ಸಾಕಾಣಿಕೆ** | **ಬೇಸಿಗೆ ತಿಂಗಳಿನಲ್ಲಿ ಕೋಳಿ ಸಾಕಾಣಿಕೆ ಸಲಹೆಗಳು :**<br>ಸರಾಸರಿ ಉಷ್ಣಾಂಶ 33–36 °C , ಸರಾಸರಿ ಆರ್ದ್ರತೆ ಪ್ರಮಾಣ, < 50 % (RH) **ಮತ್ತು** ಸರಾಸರಿ ಗಾಳಿಯ ವೇಗ < 5 ಕಿ.ಮೀ/ಘಂಟೆಗೆ<br>➢ ನೀರಿನ ಟ್ಯಾಂಕ್ ನ ಮೇಲ್ಭಾವಣಿಯನ್ನು ಒದ್ದೆಯಾದ ಗೋಣಿ ಚೀಲದಲ್ಲಿ ಮುಚ್ಚಿಡಬೇಕು ಇದರಿಂದ ನೀರು ಬಿಸಿಯಾಗುವುದನ್ನು ತಡೆಯಬಹುದು.<br>➢ ಬೇಸಿಗೆ ಹೆಚ್ಚಾಗಿರುವುದರಿಂದ ಕೋಳಿಗಳಿಗೆ ಬೆಳಗಿನ ಜಾವ ಮತ್ತು ಸಂಜೆ ವೇಳೆಯಲ್ಲಿ ನೀರನ್ನು ಯತೇಚ್ಚವಾಗಿ ಕೊಡಬೇಕು.<br>➢ ಕಿಟಕಿಯಲ್ಲಿ ಗಾಳಿಯು ಸರಾಗವಾಗಿ ಬೀಸುವ ಹಾಗೆ ನೋಡಿಕೊಳ್ಳಬೇಕು<br>➢ ಪೆಡೆಸ್ಟ್ರಾನ್ ಫ್ಯಾನ್ ಮೂಲಕ ಬಿಸಿ ಗಾಳಿಯು ಹೊರಹೋಗುವಂತೆ ನೋಡಿಕೊಳ್ಳಬೇಕು. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಪ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.